ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಸ್ಪೆಷಲ್ ಕೇಸ್ ನಂಃ 59/2010
(ಫ್ರಾಸಾ-27 ಚಾಸಾ-56 )
ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು
ದಿಃ 13.01.2023.

| | | |
|---|---|---|
| ಸಾಕ್ಷಿದಾರರ ಹೆಸರು | - | ಕೆ. ಷರೀಫ್ |
| ತಂದೆಯ ಹೆಸರು | - | ಮೊಹಮ್ಮದ್ |
| ವಯಸ್ಸು | - | 63 ವರ್ಷ, |
| ಉದ್ಯೋಗ | - | ಹೋಟೇಲ್ ಕೆಲಸ |
| ವಾಸ | - | ದೊಡ್ಡಬಳ್ಳಾಪುರ. |

ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಕರವರಿಂದಃ

1. ಮೃತ 8 ನೇ ಆರೋಪಿ ರಾಮಚಂದ್ರಪ್ಪ ಇವರ ಪರಿಚಯ ಇಲ್ಲ. ಫ್ರಾಸಾ-15 ನರಸಿಂಹಮೂರ್ತಿ ಮತ್ತು ಚಾಸಾ-58 ಎಂ. ಕೃಷ್ಣಪ್ಪ ಇವರ ಪರಿಚಯ ಇಲ್ಲ. ಈಗ ತೋರಿಸಲಾದ ನಿಪಿ-17 ದಾಖಲೆ ಮೇಲೆ ನನ್ನ ಸಹಿ ಇದೆ. ಅದರಲ್ಲಿರುವ ಸಾಕ್ಷಿದಾರರ ಸಹಿಯನ್ನು ನಿಪಿ-17(ಬಿ) ಎಂದು ಗುರ್ತಿಸಲಾಯಿತು. ಸದರಿ ದಾಖಲೆಗೆ ಈಗ ಸುಮಾರು 10-12 ವರ್ಷಗಳ ಹಿಂದೆ ನನ್ನ ಹೋಟೇಲ್ ಹತ್ತಿರ ಪೋಲಿಸರು ನನ್ನ ಸಹಿ ಪಡೆದಿದ್ದಾರೆ. ಪೋಲಿಸರು ನನಗೆ ಯಾವುದೇ ಆರೋಪಿಯನ್ನು ತೋರಿಸಿಲ್ಲ ಮತ್ತು ಯಾವುದೇ ಸ್ಥಳಕ್ಕೆ ನನ್ನನ್ನು ಕರೆದುಕೊಂಡು ಹೋಗಿಲ್ಲ. ಈಗ ತೋರಿಸಿದ ಮು.ಮಾ-8 ನೀಲಗಿರಿ ದೊಣ್ಣೆಯನ್ನು ನಾನು ನೋಡಿಲ್ಲ. ಮು.ಮಾ-8 ರ ಮೇಲೆ ನನ್ನ ಸಹಿ ಇದೆ. ಸದರಿ ಸಹಿಯನ್ನು ಮು.ಮಾ-8(ಬಿ) ಎಂದು ಗುರ್ತಿಸಲಾಯಿತು.

(ಈ ಹಂತದಲ್ಲಿ ಮಾನ್ಯ ಪಿಪಿ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿದ್ದರಿಂದ ಅನುಮತಿ ನೀಡಲಾಯಿತು.)

ಪಾಟೀ ಸವಾಲು ಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಕರವರಿಂದಃ

2. ದಿಃ15.03.2010 ರಂದು ಪೋಲಿಸರು ನನ್ನನ್ನು ಮತ್ತು ಫ್ರಾಸಾ-15 ಮತ್ತು ಚಾಸಾ-58 ಇವರನ್ನು ಠಾಣೆಗೆ ಬೆಳಗ್ಗೆ 10.30 ಕ್ಕೆ ಕರೆಸಿದ್ದರು ಎಂದರೆ ಸರಿಯಲ್ಲ. ಠಾಣೆಯಲ್ಲಿ ನಮಗೆ 8 ನೇ ಆರೋಪಿಯನ್ನು ತೋರಿಸಿದರು ಎಂದರೆ ಸರಿಯಲ್ಲ. ಸದರಿ ಆರೋಪಿ ನಮ್ಮನ್ನು ಮತ್ತು ಪೋಲಿಸರನ್ನು ಬಂಡೀಪುರ ಗ್ರಾಮದ ಮಾರ್ಗವಾಗಿ ತಿಮ್ಮಯ್ಯನವರ ಇಟ್ಟಿಗೆ ಗೂಡಿನ ಎದುರಿನ ಕಾಲುದಾರಿಯ ಪಕ್ಕದಲ್ಲಿರುವ ಗೋಣಿಮರದ ಹತ್ತಿರ ಕರೆದುಕೊಂಡು ಹೋಗಿ ಕಾಡುಗಿಡಗಳ

ಪೊದೆಯಿಂದ ಮು.ಮಾ-8 ಬಡಿಗೆಯನ್ನು ಹಾಜರುಪಡಿಸಿದ ಎಂದರೆ ಸರಿಯಲ್ಲ. ಪೋಲಿಸರು ಸದರಿ ದೊಣ್ಣೆಯನ್ನು ನಮ್ಮ ಸಮಕ್ಷಮ ನಿಪಿ-17 ರಂತೆ ಮಹಜರ್ ಮಾಡಿ ಅಮಾನತುಪಡಿಸಿಕೊಂಡು ಅದಕ್ಕೆ ಎನ್‌ಪಿ ಎಂದು ಸೀಲ್ ಮಾಡಿದರು ಎಂದರೆ ಸರಿಯಲ್ಲ. ಅಲ್ಲೇ ಸ್ಥಳದಲ್ಲಿ ಬೆಳಗ್ಗೆ 11.30 ರಿಂದ ಮಧ್ಯಾಹ್ನ 12.15 ಘಂಟೆ ಅವಧಿಯಲ್ಲಿ ನಿಪಿ-17 ಮಹಜರ್ ಗೆ ನಮ್ಮ ಸಹಿಗಳನ್ನು ಪಡೆದಿದ್ದಾರೆ ಎಂದರೆ ಸರಿಯಲ್ಲ. ಈಗ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ</u>** ಎಲ್ಲಾ ಆರೋಪಿತರ ಪರ ವಕೀಲರು ತಮ್ಮ ಪರವಾಗಿ ಸಾಕ್ಷಿಯ ಪಾಟೀ ಸವಾಲು ಇಲ್ಲ ಎಂದು ತಿಳಿಸುತ್ತಾರೆ.

(ಸಾಕ್ಷಿ ಹೇಳಿದಂತೆ ಹೇಳಿಕೆಯನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಡೀಕರಿಸಿದ್ದೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ವಿ. ಎಂ. ಆನಂದಶೆಟ್ಟಿ)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು